# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೧<br>**Part – I** | ಬೆಂಗಳೂರು, ಮಂಗಳವಾರ, ೨೬, ಮೇ, ೨೦೨೬ (ಜ್ಯೇಷ್ಠ, ೦೫, ಶಕವರ್ಷ, ೧೯೪೮)<br>**BENGALURU, TUESDAY, 26, MAY, 2026 ( JYAISTHA , 05, SHAKAVARSHA, 1948)** | ನಂ. ೪೦೦<br>**No. 400** |


## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಪೀಣ್ಯ ಒಳಗೊಂಡಂತೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಘೋಷಿಸಲಾಗಿರುವ ವಿಶೇಷ ಹೂಡಿಕೆ ಪ್ರದೇಶ (SIR) ಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಹಣೆ ಕುರಿತು.

**ಓದಲಾಗಿದೆ:**

1. ಸರ್ಕಾರದ ಅಧಿಸೂಚನೆ-I-III ಸಂಖ್ಯೆ: CI 72 SPQ 2025, ದಿನಾಂಕ 09.06.2025.
2. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 42 SPQ 2025, ದಿನಾಂಕ 19.03.2025.
3. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 11 SPQ 2025, ದಿನಾಂಕ 28.02.2025.
4. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 26 SPQ 2025, ದಿನಾಂಕ 28.02.2025.
5. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 27 SPQ 2025, ದಿನಾಂಕ 28.02.2025.
6. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 28 SPQ 2025, ದಿನಾಂಕ 28.02.2025.
7. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 08 SPQ 2025, ದಿನಾಂಕ 10.02.2025.
8. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 09 SPQ 2025, ದಿನಾಂಕ 10.02.2025.
9. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 10 SPQ 2025, ದಿನಾಂಕ 10.02.2025.
10. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 12 SPQ 2025, ದಿನಾಂಕ 10.02.2025.
11. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 13 SPQ 2025, ದಿನಾಂಕ 10.02.2025.
12. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 15 SPQ 2025, ದಿನಾಂಕ 10.02.2025.
13. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 16 SPQ 2025, ದಿನಾಂಕ 10.02.2025.
14. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 17 SPQ 2025, ದಿನಾಂಕ 10.02.2025.
15. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 20 SPQ 2025, ದಿನಾಂಕ 10.02.2025.
16. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 21 SPQ 2025, ದಿನಾಂಕ 10.02.2025.
17. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 23 SPQ 2025, ದಿನಾಂಕ 10.02.2025.
18. ಸರ್ಕಾರದ ಅಧಿಸೂಚನೆ- I-III ಸಂಖ್ಯೆ: CI 24 SPQ 2025, ದಿನಾಂಕ 10.02.2025.

****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ 1-18 ರಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ The Karnataka Special Investment Region Act, 2022 ರಡಿಯಲ್ಲಿ ಪೀಣ್ಯ ಒಳಗೊಂಡಂತೆ ರಾಜ್ಯಾದ್ಯಂತ 18 ವಿಶೇಷ ಹೂಡಿಕೆ ಪ್ರದೇಶಗಳನ್ನು (SIR) ಘೋಷಿಸಲಾಗಿದ್ದು, ಸದರಿ SIR ಗಳು ಕಾಯ್ದೆಯ ಕಲಂ 29 ರ ಅವಕಾಶದಂತೆ Industrial Township ಎಂದು ಪರಿಗಣಿಸಲ್ಪಡುತ್ತವೆಂದು ಅಧಿಸೂಚನೆಯಲ್ಲಿ ಉಲ್ಲೇಖಿಸಲಾಗಿದೆ.

The Karnataka Special Investment Region Act, 2022 ರ ಕಲಂ 29(1)ರಲ್ಲಿ (1)"Notwithstanding anything contrary contained in any other law in force, the area within the Special Investment Region, except the village site area (gramtana) of a village panchayat, municipal area and municipal corporation or Bruhat Bengaluru Mahanagara Palike area shall deemed to be an industrial township within the meaning of the provisions of clause (1) of article 243Q of the Constitution of India, from the date it is so notified in the official Gazette, by the State Government ಎಂದು ನಿರ್ದಿಷ್ಟಪಡಿಸಲಾಗಿದೆ.

ಮುಂದುವರೆದು, ಸಂವಿಧಾನದ ವಿಧಿ 243Q ರಲ್ಲಿ ಕೆಳಕಂಡಂತೆ ನಿರ್ದಿಷ್ಟಪಡಿಸಲಾಗಿದೆ.

(1) There shall be constituted in every State, -

(a) a Nagar Panchayat (by whatever name called) for a transitional area, that is to say, an area in transition from a rural area to an urban area;

(b) a Municipal Council for a smaller urban area; and

(c) a Municipal Corporation for a larger urban area,

in accordance with the provisions of this Part:

Provided that a Municipality under this clause may not be constituted in such urban area or part thereof as the Governor may, having regard to the size of the area and the municipal services being provided or proposed to be provided by an industrial establishment in that area and such other factors as he may deem fit, by public notification, specify to be an industrial township.

(2) In this article, "a transitional area", "a smaller urban area" or "a larger urban area" means such area as the Governor may, having regard to the population of the area, the density of the population therein, the revenue generated for local administration, the percentage of employment in nonagricultural activities, the economic importance or such other factors as he may deem fit, specify by public notification for the purposes of this Part.

ನಗರ ಸ್ಥಳೀಯ ಸಂಸ್ಥೆಗಳು ಸಂವಿಧಾನದ ವಿಧಿ 243Q (1) ರಡಿಯಲ್ಲಿನ ಅವಕಾಶದಂತೆ ಸಂಬಂಧಿತ ಕಾಯ್ದೆಯಡಿ (The Greater Bengaluru Governance Act- 2024/ The Karnataka Municipal Corporations Act, 1976/ The Karnataka Municipalities Act, 1964) ಮಾನ್ಯ ರಾಜ್ಯಪಾಲರ ಅನುಮೋದನೆಯೊಂದಿಗೆ ಅಧಿಸೂಚಿಸಿ ರಚಿಸಲಾಗಿರುವ ಹಾಗೂ ಭಾರತದ 74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯನ್ವಯ 3ನೇ ಹಂತದ ಸರ್ಕಾರವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಾಗಿರುತ್ತವೆ. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಯಾವುದೇ ಪ್ರದೇಶವನ್ನು ಸೇರ್ಪಡೆಗೊಳಿಸಬೇಕಿದ್ದಲ್ಲಿ ಅಥವಾ ಹೊರತುಪಡಿಸಬೇಕಿದ್ದಲ್ಲಿ, ಪ್ರತಿ ಪ್ರಕರಣದಲ್ಲಿ ಮಾನ್ಯ ರಾಜ್ಯಪಾಲರ ಅನುಮೋದನೆ ಪಡೆಯಬೇಕಿರುತ್ತದೆ. ಅದೇ ರೀತಿಯಲ್ಲಿ The Karnataka Special Investment Region Act, 2022ರ ಕಲಂ 29 ರಡಿಯಲ್ಲಿ ಘೋಷಿಸುವ ಪ್ರತಿ ಟೌನ್‌ಶಿಪ್‌ಗೆ ಮಾನ್ಯ ರಾಜ್ಯಪಾಲರ ನಿರ್ದಿಷ್ಟ ಆದೇಶವನ್ನು ಪಡೆದು ಅಧಿಸೂಚಿಸಬೇಕಿರುತ್ತದೆ.

ಸಂವಿಧಾನದ ವಿಧಿ 243Q (1) ರೊಂದಿಗೆ The Karnataka Special Investment Region Act, 2022ರ ಕಲಂ 29 ನ್ನು ಓದಲಾಗಿ, ಟೌನ್‌ಶಿಪ್‌ಗಳನ್ನು ಕಾಯ್ದೆಯಡಿ ಹೊಸ ಪ್ರದೇಶಗಳಲ್ಲಿ ಮಾತ್ರ ರಚಿಸಬಹುದಾಗಿದ್ದು, ಅಸ್ತಿತ್ವದಲ್ಲಿರುವ ನಗರ ಮತ್ತು ಮುನಿಸಿಪಾಲಿಟಿ ವಾರ್ಡ್ ಪ್ರದೇಶಗಳಲ್ಲಿ ಟೌನ್‌ಶಿಪ್‌ಗಳನ್ನು ಘೋಷಿಸಲು ಬರುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಸದರಿ ಪ್ರದೇಶಗಳು The Karnataka Special Investment Region Act, 2022 ಗೆ ಒಳಪಟ್ಟರೂ ಸಹ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರ ಮತ್ತು ಕರ್ತವ್ಯಗಳನ್ನು ಸಂಬಂಧಿತ ನಗರ ಸ್ಥಳೀಯ ಸಂಸ್ಥೆಗಳೇ ನಿರ್ವಹಿಸಬೇಕಿರುತ್ತದೆ.

ಪೀಣ್ಯ ಒಳಗೊಂಡಂತೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಘೋಷಿಸಿರುವ ಹಲವಾರು ವಿಶೇಷ ಕೈಗಾರಿಕೆ ಪ್ರದೇಶಗಳು ಈಗಾಗಲೇ ಅಸ್ತಿತ್ವದಲ್ಲಿರುವ ಹಾಗೂ ಸಂವಿಧಾನದ ವಿಧಿ 243Q(2) ರಲ್ಲಿ ನಿರ್ದಿಷ್ಟಪಡಿಸಿರುವ ಅಂಶಗಳನ್ನು ಪರಿಗಣಿಸಿ ರಚಿಸಲಾಗಿರುವ ನಗರ ಸ್ಥಳೀಯ ಸಂಸ್ಥೆಗಳ ವಾರ್ಡ್ ಪ್ರದೇಶಗಳಲ್ಲಿ ಬರುತ್ತಿದ್ದು, ಈ ಪ್ರದೇಶಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅಥವಾ ಇತರೇ ಯಾವುದೇ ಸಂಸ್ಥೆಗೆ ಹಸ್ತಾಂತರಿಸಲು ಬರುವುದಿಲ್ಲ.

ಮೇಲೆ ವಿವರಿಸಲಾದ ಅಂಶಗಳ ಹಿನ್ನಲೆಯಲ್ಲಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 52 ಬಿಎಂಆರ್ 2026(ಇ),**

**ಬೆಂಗಳೂರು, ದಿನಾಂಕ:26.05.2026.**

ಪೀಣ್ಯ ಒಳಗೊಂಡಂತೆ, ನಗರ ಸ್ಥಳೀಯ ಸಂಸ್ಥೆಗಳ ಪ್ರದೇಶಗಳಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ವತಿಯಿಂದ The Karnataka Special Investment Region Act, 2022ರಡಿಯಲ್ಲಿ ಘೋಷಿಸಲಾಗಿರುವ ವಿಶೇಷ ಹೂಡಿಕೆ ಪ್ರದೇಶಗಳಲ್ಲಿ (SIR), ಸಂಬಂಧಿತ ಮಹಾನಗರ ಪಾಲಿಕೆ/ನಗರ ಪಾಲಿಕೆ/ನಗರ ಸ್ಥಳೀಯ ಸಂಸ್ಥೆಗಳು ಆಸ್ತಿ ತೆರಿಗೆ ಸಂಗ್ರಹಣೆ ಒಳಗೊಂಡಂತೆ, The Greater Bengaluru Governance Act- 2024/ The Karnataka Municipal Corporations Act, 1976/ The Karnataka Municipalities Act, 1964 ರಲ್ಲಿ ನಿರ್ದಿಷ್ಟಪಡಿಸಿರುವ ಅಧಿಕಾರ ಮತ್ತು ಕರ್ತವ್ಯಗಳ ನಿರ್ವಹಣೆಯನ್ನು ಮುಂದುವರೆಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ರಾಜೇಶ್ ಎಸ್ ಸೂಳಿಕೇರಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿಡಿಎ & ಬೆಂ-1)

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH